1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017

ದಿಃ 08.10.2021

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-4 Pw-2

| | | |
|---|---|---|
| ಹೆಸರು | ಃ | ಶಶಿಕುಮಾರ್ |
| ತಂದೆಯ ಹೆಸರು | ಃ | ಲಕ್ಷ್ಮಿನರಸಿಂಹಯ್ಯ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ದೇವಮಾಚಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ನವೀನ್‌ಕುಮಾರ್ ನನಗ ಗೊತ್ತು. ಚಾಸಾ.6 ಪ್ರಜ್ವಲ್ ಮೃತನ ತಮ್ಮ. ಚಾಸಾ.2 ಮತ್ತು 5ರವರು ಗೊತ್ತಿಲ್ಲ. ಮೃತ ನವೀನ್ ಕುಮಾರನಿಗೆ ಏನಾಗಿತ್ತೆಂದು ನನಗೆ ಗೊತ್ತಿಲ್ಲ. ಆತನ ಕೊಲೆಯಾಗಿತ್ತು ಎಂದು ಗೊತ್ತು. ಯಾವ ದಿನದಂದು ಮತ್ತು ಎಲ್ಲಿ ಎಂದು ನನಗೆ ಗೊತ್ತಿಲ್ಲ. ಆತನ ಕೊಲೆಯಾದಾಗ ನಾನು ಇರಲಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮ ಊರಿನವರೇ ಇದ್ದು ನನಗೆ ಪರಿಚಯ. ಆರೋಪಿಗಳು ಯಾವುದೇ ಕೃತ್ಯ ಎಸಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗಳು ಯಾವುದೇ ಸ್ದಳದಲ್ಲಿ ಕುಳಿತಿದ್ದು ಯಾವುದೇ

ಸಂಚು ರೂಪಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

2. ಸಾಕ್ಷಿದಾರರು ಎರಡು ಮಹಜರ್‌ಗಳು ಮತ್ತು ಅವುಗಳಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.5, 6, 5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು. ಈ ಸಹಿಗಳನ್ನು 3-4 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಅಂಗಡಿಯ ಬಳಿ ಸಂಜೆ ಕುಳಿತಿದ್ದಾಗ ಗಸ್ತುಗೆ ಬಂದಿದ್ದಾಗ ಆ ಕಾರಣಕ್ಕೆ ಪೊಲೀಸರು ಪಡೆದಿರುತ್ತಾರೆ. ನಿ.ಪಿ.5 ಮತ್ತು 6ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ನನಗೀಗ ಓದಿ ಹೇಳಿ, ನಿ.ಪಿ.7 ಮತ್ತು 8 ಎಂದು ಗುರುತಿಸಲಾದ ದಸ್ತಾವೇಜಿನಂತೆ ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿದ್ದೇನೆಂದು ಸೂಚಿಸುವುದು ಸರಿಯಲ್ಲ.

2. ದಿಃ18.10.2016ರಂದು ಮಧ್ಯಾಹ್ನ 1.30ರಿಂದ 2.30ರ ಸಮಯದಲ್ಲಿ ಡಾ. ಸದಾನಂದರವರ ಜಮೀನಿನಲ್ಲಿರುವ ವಾಲೀ ಬಾಲ್ ಆಟದ ಮೈದಾನದಲ್ಲಿ ಮತ್ತು ದೇವಮಾಚೋಹಳ್ಳಿ

ಗ್ರಾಮದ ಚಿಕ್ಕಣ್ಣನವರ ಮನೆಯ ಬಳಿ ಆರೋಪಿಗಳು ಕೃತ್ಯವೆಸಗಿದ ಸ್ಥಳವನ್ನು ತೋರಿಸಿದಂತೆ ಪೊಲೀಸರು ನನ್ನ ಮತ್ತು ಚಾಸಾ.7 ರವರ ಸಮಕ್ಷಮ, ನಿ.ಪಿ.5 ರಂತೆ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿಯೇ ನಮ್ಮ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ.

3. ದಿಃ18.10.2016 ರಂದು ಮಧ್ಯಾಹ್ನ 2.45 ರಿಂದ 3.45 ರ ಸಮಯದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ನಾಗನಹಳ್ಳಿ ಮತ್ತು ತಿಪ್ಪಗೊಂಡನಹಳ್ಳಿ ಡ್ಯಾಂ ಕಡೆಗೆ ಹೋಗುವ ರಸ್ತೆಯ ನಡುವಿನ ಸ್ಥಳದಲ್ಲಿ ಆರೋಪಿಗಳು ಕೊಲೆ ಸಂಚು ರೂಪಿಸಿದ ಸ್ಥಳ ಎಂದು ತೋರಿಸಿದ್ದು ಪೊಲೀಸರು ನನ್ನ ಮತ್ತು ಚಾಸಾ.7 ರವರ ಸಮಕ್ಷಮ, ನಿ.ಪಿ.6 ರಂತೆ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿಯೇ ನಮ್ಮ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಟಿ.ಜಿ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿದ್ದಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.